# ಸಯ್ಯದ್‌ರವರ ಸ್ವಾತಂತ್ರ್ಯ ಮತ್ತು ನಿದ್ರಾಹೀನತೆಯನ್ನು ತೂಕ ಕಳೆದುಕೊಳ್ಳುವಿಕೆಯು ನಿಯಂತ್ರಿಸಿತು.

6 ಲಿಪೋಸಕ್ಷನ್ ಪ್ರಕ್ರಿಯೆಗಳಿಗೊಳಪಟ್ಟ ಹೊರತಾಗಿಯೂ, 164 ಕೆಜಿ ತೂಕದ ಈ 55 ವರ್ಷದ ವ್ಯಕ್ತಿಯು ನಿದ್ದೆಯ ಸಂದರ್ಭದಲ್ಲಿ ಉಸಿರಾಟಕ್ಕೆ ಅಡ್ಡಿಯಾಗುವಿಕೆ ಮತ್ತು ನಿರ್ಬಂಧಿತ ಚಲನಾ ರೋಗ ಸಮಸ್ಯೆಯಿಂದ ಬಳಲುತ್ತಿದ್ದರು. ಇನ್ಸುಲಿನ್ ನಿರೋಧಕತೆಯನ್ನು ವೃದ್ಧಿಸಲು ಆರಂಭಿಸಿದ ನಂತರ, ಈ ಸಮಸ್ಯೆಗೆ ವೈದ್ಯಕೀಯ ನೆರವು ಪಡೆಯುವುದು ಸೂಕ್ತವೆಂಬುದನ್ನು ಅವರು ಮನಗಂಡರು. ಅವರು ಈ ಸಮಸ್ಯೆಗೆ ಸಂಬಂಧಿಸಿ, ಫೋರ್ಟಿಸ್ ವೈದ್ಯರನ್ನು ಸಂಪರ್ಕಿಸಿದಾಗ ಅವರಿಗೆ ತೂಕ ಇಳಿಕೆಯ ಶಸ್ತ್ರಚಿಕಿತ್ಸೆಯನ್ನು (ಬ್ಯಾರಿಯಾಟ್ರಿಕ್ ಸರ್ಜರಿ) ಸೂಚಿಸಲಾಯಿತು.

ಫೋರ್ಟಿಸ್ ಆಸ್ಪತ್ರೆಯ ಡಾ. ಶಬೀರ್ ಅಹ್ಮದ್ (ಸೀನಿಯರ್ ಕನ್‌ಸಲ್ಟೆಂಟ್ ಲಾಪ್ರೋಸ್ಕೋಪಿಕ್ ಸರ್ಜನ್), ಹಸಿವನ್ನು ಕ್ರಿಯಾಶೀಲಗೊಳಿಸುವ ಗ್ರೆಲಿನ್ ಎಂಬ ಹಾರ್ಮೋನಿನ ಉತ್ಪಾದನೆಯನ್ನು ಕಡಿಮೆಗೊಳಿಸುವ ಮತ್ತು ದೇಹದೊಳಗಡೆ ತೆಗೆದುಕೊಳ್ಳುವ ಆಹಾರವನ್ನು ಸೀಮಿತಗೊಳಿಸುವ, ಹೊಟ್ಟೆಯ ಗಾತ್ರವನ್ನು ಕಡಿಮೆ ಮಾಡುವ ಸ್ಲೀವ್ ಗ್ಯಾಸ್ಟ್ರೆಕ್ಟೊಮಿ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸಿದರು.
21 ತಿಂಗಳುಗಳು ಕಳೆದ ನಂತರ ಸಯ್ಯದ್‌ರವರು 80 ಕೆಜಿ ತೂಕವನ್ನು ಕಳೆದುಕೊಂಡರು, ಕ್ರಿಯಾತ್ಮಕವಾದ ಜೀವನಶೈಲಿಯನ್ನು ನಡೆಸಲು ಸಮರ್ಥರಾಗುವ ಮೂಲಕ, ಉತ್ತಮ ರೀತಿಯ ನಿದ್ರೆಯ ಅನುಭವವನ್ನು ಅನುಭವಿಸಿದರು. ತಮ್ಮ ಆತ್ಮ ವಿಶ್ವಾಸವನ್ನು ಪುನರ್ಪಡೆದ ನಂತರ, ಈಗ ಅವರು ಬೊಜ್ಜುತನವಿರುವ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಫೋರ್ಟಿಸ್ ಆಸ್ಪತ್ರೆಯಲ್ಲಿ ತೂಕ ಇಳಿಕೆ ಶಸ್ತ್ರಚಿಕಿತ್ಸೆಯ ಬಗ್ಗೆ (ಬ್ಯಾರಿಯಾಟ್ರಿಕ್ ಸರ್ಜರಿ) ಮಾಹಿತಿ ನೀಡಿ ಅವರನ್ನು ಚಿಂತಾಮುಕ್ತರಾಗಿಸುವ ಬಗ್ಗೆ ನಿರ್ಧರಿಸಿದ್ದಾರೆ.

### ಈ ತೂಕ ಇಳಿಕೆ ಶಸ್ತ್ರಚಿಕಿತ್ಸೆಯನ್ನು ಯಾಕೆ ನಡೆಸಬೇಕು?

ಈ ತೂಕ ಇಳಿಕೆ ಶಸ್ತ್ರಚಿಕಿತ್ಸೆಯ ಬಗ್ಗೆ ಉತ್ತಮ ಫಲಿತಾಂಶವನ್ನು ಕಂಡುಕೊಳ್ಳಲು ಮತ್ತು ಅಪಾಯಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ, ಕಳೆದ ದಶಕಗಳಿಂದ ನಿರಂತರವಾಗಿ ವೈದ್ಯಕೀಯ ತಜ್ಞರು ಸಂಶೋಧನೆ ನಡೆಸುತ್ತಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ, ಡಯೆಟಿಂಗ್‌ನಂತಹ ತೂಕ ಇಳಿಕೆ ವಿಧಾನದೊಂದಿಗೆ ತುಲನೆ ಮಾಡಿದಾಗ, ಇತರ ತೂಕ ಇಳಿಕೆ ಚಿಕಿತ್ಸೆಗಳನ್ನು ಪಡೆದು ವಿಫಲವಾದ ವ್ಯಕ್ತಿಗಳಲ್ಲಿ ಈ ಶಸ್ತ್ರಚಿಕಿತ್ಸೆಯು ದೀರ್ಘ ಕಾಲದವರೆಗೆ ಸುಸ್ಥಿರವಾದ ತೂಕ ನಿರ್ವಹಣೆಯನ್ನು ಮಾಡುವ ಮೂಲಕ ಯಶಸ್ಸು ಗಳಿಸಿದೆ. ಹೆಚ್ಚಿನ ಅಧ್ಯಯನಗಳ ಪ್ರಕಾರ, ಈ ತೂಕ ಇಳಿಕೆ ಶಸ್ತ್ರಚಿಕಿತ್ಸೆಯನ್ನು ಆಯ್ಕೆಮಾಡಿಕೊಂಡಂತಹ ವ್ಯಕ್ತಿಗಳು ತಮ್ಮ ಮಾನಸಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಕೊಂಡಿದ್ದಾರಲ್ಲದೇ, ಉದ್ಯೋಗಾವಕಾಶಗಳು ಮತ್ತು ಜೀವನಶೈಲಿಯಲ್ಲೂ ಸುಧಾರಣೆಯನ್ನು ಕಂಡುಕೊಂಡಿದ್ದಾರೆಂದು ಅಭಿಪ್ರಾಯ ವ್ಯಕ್ತವಾಗಿದೆ.

### ನಿಮಗಿದು ತಿಳಿದಿದೆಯೇ?

ಬೊಜ್ಜುತನವು ನಿಧಾನವಾಗಿ ಈ ಕೆಳಗಿನ ಅಪಾಯಗಳನ್ನು ಹೆಚ್ಚಿಸುತ್ತದೆ:

- ಟೈಪ್ 2 ಮಧುಮೇಹ ರೋಗ
- ಅಧಿಕ ರಕ್ತದೊತ್ತಡ
- ಅಧಿಕ ಕೊಲೆಸ್ಟ್ರಾಲ್
- ನಿದ್ದೆಯ ಸಂದರ್ಭದಲ್ಲಿ ಉಸಿರಾಟಕ್ಕೆ ಅಡ್ಡಿಯಾಗುವಿಕೆ

ದೇಹದ ಅಧಿಕ ತೂಕವು ಹೃದಯ ಸಂಬಂಧಿ ರೋಗಗಳು, ಸಂದುಗಳು ಕ್ಷೀಣಗೊಳ್ಳುವ ರೋಗ, ಬಂಜೆತನ, ತೀವ್ರ ಸ್ವರೂಪದ ತಲೆನೋವು, ಖಿನ್ನತೆ, ಅಸ್ತಮಾ, ನಾನ್ ಆಲ್ಕೋಹಾಲಿಕ್ ಫ್ಯಾಟ್ಟಿ ಲಿವರ್ ಸಂಬಂಧಿ ರೋಗಗಳು, ಸಂಧಿವಾತ ಮತ್ತು ನಿರ್ದಿಷ್ಟ ಮಾದರಿಯ ಕ್ಯಾನ್ಸರ್‌ಗಳು ಇತ್ಯಾದಿ ರೋಗಗಳು ಬರಲು ಕೂಡ ಕಾರಣವಾಗುತ್ತದೆ.

### ನೀವೊಂದು ವೇಳೆ ಈ ಸಮಸ್ಯೆ ಹೊಂದಿದ್ದರೆ, ತೂಕ ಇಳಿಕೆ ಶಸ್ತ್ರಚಿಕಿತ್ಸೆ (ಬ್ಯಾರಿಯಾಟ್ರಿಕ್ ಸರ್ಜರಿ) ನಿಮಗೆ ಒಂದು ಉತ್ತಮ ಪರಿಹಾರವಾಗಬಲ್ಲುದು :

- ನಿಮ್ಮ ಬಿಎಮ್‌ಐ = ತೂಕ, ಕೆಜಿಗಳಲ್ಲಿ/(ಎತ್ತರ ಮೀಟರ್‌ಗಳಲ್ಲಿ) ಟೈಪ್ 2 ಮಧುಮೇಹ, ಅಧಿಕ ರಕ್ತದೊತ್ತಡ ಇತ್ಯಾದಿಗಳಂತಹ ಕೋ ಮಾರ್ಬಿಡ್ ಕಂಡೀಷನ್ ಸಹಿತ ಅಥವಾ ಕೋ ಮಾರ್ಬಿಡ್ ಕಂಡೀಷನ್ ರಹಿತವಾಗಿ 2 I 32.5ಕೆಜಿ/ಎಮ್2 ಇದ್ದಾಗ ಚಿಕಿತ್ಸೆ ಪಡೆಯಬಹುದು.
- ನೀವೊಂದು ವೇಳೆ, 18 ವರ್ಷ ವಯಸ್ಸು ಅಥವಾ ಅದಕ್ಕಿಂತ ಹೆಚ್ಚಿನ ವಯೋಮಾನದವರಾಗಿದ್ದಾಗ.
- ಡಯೆಟಿಂಗ್ ಮತ್ತು ವ್ಯಾಯಾಮ ಚಟುವಟಿಕೆಗಳಂತಹ ಸಾಂಪ್ರದಾಯಿಕ ವಿಧಾನದ ಮೂಲಕ ತೂಕ ಕಳೆದುಕೊಳ್ಳಲು ಅಸಾಧ್ಯವಾದಾಗ ಈ ಚಿಕಿತ್ಸೆ ಪಡೆಯಬಹುದು.
- ನೀವೊಂದು ವೇಳೆ, ಆರೋಗ್ಯಕರ ಜೀವನ, ಚಟುವಟಿಕೆಯಿಂದ ಕೂಡಿದ ಜೀವನಶೈಲಿಯನ್ನು ನಡೆಸಲು ಸಿದ್ಧರಿದ್ದಲ್ಲಿ.
- ಈ ಶಸ್ತ್ರಚಿಕಿತ್ಸಾ ಪ್ರಕ್ರಿಯೆಯಿಂದ ಉಂಟಾಗಬಹುದಾದ ಪ್ರಯೋಜನಗಳು, ಅಪಾಯಗಳು ಮತ್ತು ಸಂಕೀರ್ಣತೆಗಳ ಬಗ್ಗೆ ನೀವು ತಿಳಿದುಕೊಂಡಲ್ಲಿ.

ತೂಕ ಇಳಿಕೆ ಪ್ರಕ್ರಿಯೆಯ ಶಸ್ತ್ರಚಿಕಿತ್ಸೆಯ ಬಗ್ಗೆ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ನೀವು ಫೋರ್ಟಿಸ್ ಆಸ್ಪತ್ರೆಗೆ ಈ ಸಂಖ್ಯೆಗೆ ಕರೆ ಮಾಡಬಹುದು: **95388 63359.**



ಸಯ್ಯದ್ ಸಿರಜ್ ಅಹ್ಮದ್ 21 ತಿಂಗಳಲ್ಲಿ 80 ಕಿಲೋ ಕಳೆದುಕೊಂಡಿದ್ದಾರೆ